II	ಚಿಕ್ಕೋಡಿ ಉಪ ಕಾಲುವೆಯಿಂದ ಆಗುವ ಒಟ್ಟು ನೀರಾವರಿ ಕ್ಷೇತ್ರ	34,154
1)	ಕಬ್ಬೂರ ಸುರಂಗ ಮಾರ್ಗದವರೆಗೆ ಆಗುವ ನೀರಾವರಿ ಕ್ಷೇತ್ರ	12,243
2)	ಕಬ್ಬೂರ ಸುರಂಗ ಮಾರ್ಗದ ನಂತರ ಆಗುವ ನೀರಾವರಿ ಕ್ಷೇತ್ರ	21,911

ಕೃಷ್ಣ ಮೇಲ್ದಂಡೆ ಯೋಜನೆಯ ನಾರಾಯಣಪುರ ಬಲದಂಡೆ ಕಾಲುವೆಯ ಕಾಮಗಾರಿ ಕೆಲಸ

237 - ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣ ಮೇಲ್ದಂಡೆ ಯೋಜನೆಯ ನಾರಾಯಣಪುರ ಬಲದಂಡೆ ಕಾಲುವೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆಯೇ? ಹಾಗಾಗಿದ್ದಲ್ಲಿ ಯಾವ ದಿನಾಂಕದಿಂದ ಕಾರ್ಯಾರಂಭ ಮಾಡಲಾಗಿದೆ, ಹಾಗೂ ಈವರೆಗಿನ ಭೌತಿಕ ಹಾಗೂ ಆರ್ಥಿಕ ಪ್ರಗತಿ ಎಷ್ಟು?

ಆ) ಈ ಕಾಲುವೆಯಿಂದ ನೀರಾವರಿಯಾಗುವ ಪ್ರದೇಶ ಎಷ್ಟು? (ತಾಲ್ಲೂಕುವಾರು ವಿವರ ಕೊಡಿರಿ)

ಇ) ಈ ಕಾಲುವೆಯ ಕಾಮಗಾರಿಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಇಲ್ಲಾ.

ಆ) ಈ ಕಾಲುವೆಯಡಿಯಲ್ಲಿ ರಾಯಚೂರು ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯ ಒದಗಿಸುವ ತಾಲ್ಲೂಕುವಾರು ಪ್ರದೇಶದ ವಿವರಗಳು ಹೀಗಿವೆ.

1)	ಲಿಂಗಸುಗೂರು	13,440 ಹೆಕ್ಟೇರ್
2)	ದೇವದುರ್ಗ	34,440 ಹೆಕ್ಟೇರ್
3)	ರಾಯಚೂರು	36,120 ಹೆಕ್ಟೇರ್
		84,000

ಇ) ಕ್ರಿ.ಶ. 2000 ಯೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಹಂಚಿಕೆ ಮಾಡಿರುವ ನಿವೇಶನಗಳು

260 - ಶ್ರೀ ಜೆ.ಎ. ಫರ್ನಾಂಡೀಸ್ (ನಾಮನಿರ್ದೇಶನ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 1989 ರಿಂದ 1994ರ ಅಂತ್ಯದವರೆಗೆ ಹಂಚಿಕೆ ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು?

ಆ) ಇವುಗಳಲ್ಲಿ, ಅಲ್ಪಸಂಖ್ಯಾತರಿಗೆ ಹಂಚಿಕೆ ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು?

ಇ) ವಿವಿಧ ಅಲ್ಪಸಂಖ್ಯಾತ ವರ್ಗದವರಿಗೆ ನಿವೇಶನ ಹಂಚಿಕೆ ಮಾಡಲು ಮೀಸಲಾತಿ ಏನಾದರೂ ಇದೆಯೇ?

ಈ) ಹಾಗಿದ್ದಲ್ಲಿ, ಕ್ರಿಶ್ಚಿಯನ್ ಮತ್ತು ಆಂಗ್ಲೋ ಇಂಡಿಯನ್‌ರವರಿಗೆ ನಿಗಧಿಪಡಿಸಿರುವ ಶೇಕಡಾವಾರು ಮೀಸಲಾತಿ ಎಷ್ಟು?

ಉ) ಇಲ್ಲದಿದ್ದಲ್ಲಿ, ಅಲ್ಪಸಂಖ್ಯಾತರಿಗೆ ನಿವೇಶನ ಹಂಚಿಕೆ ಮಾಡಲು ಒಂದು ನಿರ್ದಿಷ್ಟ ಶೇಕಡಾವಾರು ಮೀಸಲಾತಿ ಮಾಡಲು ಹೆಜ್ಜೆ ಇಡುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 1989 ರಿಂದ 1994ರ ಅಂತ್ಯದವರೆಗೆ ಒಟ್ಟು 5355 ನಿವೇಶನಗಳ ಹಂಚಿಕೆ ಮಾಡಿರುತ್ತದೆ.

ಆ) ವಿವಿಧ ವರ್ಗದಲ್ಲಿ ನಿವೇಶನಗಳನ್ನು ಹಂಚುತ್ತಿರುವುದರಿಂದ ಅವುಗಳಲ್ಲಿ ಅಲ್ಪ ಸಂಖ್ಯಾತರೂ ಸೇರಿದ್ದಾರೆ. ಸ್ಪಷ್ಟ ಸಂಖ್ಯೆ ತಿಳಿದಿಲ್ಲ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಅಂತಹ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ನಗರದ ವಿದ್ಯುತ್ ಚಿತಾಗಾರಗಳಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆ

335 - ಶ್ರೀ ರಾಮರಿಂಗರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನ ವಿಲ್ಸನ್‌ಗಾರ್ಡನ್‌ನಲ್ಲಿರುವ ವಿದ್ಯುತ್ ಚಿತಾಗಾರವನ್ನು ಆಧುನೀಕರಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೊಸದಾಗಿ ಎತ್ತರದ ಚಿಮಣಿಗಳನ್ನು ಹಾಕಿ ಪರಿಸರ ಮಾಲಿನ್ಯ ತಡೆಗಟ್ಟಲು ಕ್ರಮ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ವಿದ್ಯುತ್ ಚಿತಾಗಾರಕ್ಕೆ ಪರಿಸರ ಮಾಲಿನ್ಯ ಮಂಡಳಿಯವರಿಂದ ನುಮತಿ ಪಡೆಯಲಾಗಿದೆಯೇ?

ಈ) ಹಾಗಿದ್ದಲ್ಲಿ, ಯಾವಾಗ ಪಡೆಯಲಾಯಿತು?

ಉ) ಈ ಶವಾಗಾರವನ್ನು ಎಂದು ಪ್ರಾರಂಭಿಸಲಾಗಿದೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಬಂದಿದೆ ಸ್ವಾಮಿ.

ಆ) ಹೌದು ಸ್ವಾಮಿ

ಇ) ಹೌದು ಸ್ವಾಮಿ

ಈ) 6-2-1993

ಉ) ಆಧುನೀಕರಣ ಇನ್ನೂ ಇಲ್ಲ.

ನಗರದಲ್ಲಿ ಲೈವ್ ಬ್ಯಾಂಡ್ ಮ್ಯೂಸಿಕ್‌ಅನ್ನು ನಿಲ್ಲಿಸುವ ಬಗ್ಗೆ

252 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಗೃಹಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಲೈವ್‌ಬ್ಯಾಂಡ್ ಮ್ಯೂಸಿಕ್ ಕಾರ್ಯಕ್ರಮಗಳು ನಡೆಯುತ್ತಿದ್ದ ಸ್ಥಳಗಳಾವುವು?

ಆ) ಇವುಗಳನ್ನು ಇತ್ತೀಚೆಗೆ ನಿಲ್ಲಿಸಲಾಗಿರುವುದಕ್ಕೆ ಕಾರಣಗಳೇನು?